2. ಪೊಸದುರ್ಗ ತಾಲ್ಲೂಕಿನ ಹೊಸ ಕಂದೂರು ಗ್ರಾಮದ ಸರ್ವೆ ನಂ. 45, 46ರಲ್ಲಿ ಹಿಂದುಳಿದ ವರ್ಗದ ಜನರ ಸ್ವಾಧೀನದಲ್ಲಿದ್ದ ಜಮೀನಿನ ಮೇಲೆ ಅಕ್ರಮಣ ನಡೆಸಿರುವುದು,

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಿಸಿದ ಮೆಟೀರಿಯಲ್ಸ್ ಎಲ್ಲಾ ಬಂದಿದೆ, ಈ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ, ಆದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳಿ.

ಶ್ರೀ ಆರ್. ರಾಮಯ್ಯ.—ನಾಳೆ, ನಾಳೆ ಎಂದು ಹೇಳುತ್ತಾ ಹೋದರೆ ಹೇಗೆ? ಇದು ಬಹು ಮುಖ್ಯವಾದ ಪ್ರಶ್ನೆ, ಮುಂದೂಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ಗ್ಯಾರಂಟಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಆಯಿತು, ಇದನ್ನು ನಾಳೆ ತೆಗೆದುಕೊಳ್ಳೋಣ.

3) ಮಂಡಿಕೇರಿ ಜಿಲ್ಲಾ ಕಾರಾಗೃಹದ ಇಬ್ಬರು ಜೈಲ್ ಸಿಬ್ಬಂದಿ ಮತ್ತು ಎಂಟು ಮಂದಿ ವಿಚಾರಣಾಧೀನ ಖೈದಿಗಳು ಅಕ್ರಮ ಮರ ಸಾಗಾಣಿಕೆಗೆ ಯತ್ನಿಸಿ ಪೋಲೀಸರ ಬಂಧನದಲ್ಲಿರುವುದು.

ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಮಡಿಕೇರಿ ಜಿಲ್ಲಾ ಕಾರಾಗೃಹದ ಎಂಟು ಮಂದಿ ಖೈದಿಗಳ ನೆರವಿನಿಂದ ಇಬ್ಬರು ಜೈಲ್ ಸಿಬ್ಬಂದಿಯವರು ತಾಳತ್‌ಮನೆಯಿಂದ ಅಕ್ರಮ ಮರ ಸಾಗಾಣಿಕೆಗೆ ಯತ್ನಿಸಿ ಪೋಲೀಸರ ಬಂಧನದಲ್ಲಿರುವ ಬಗ್ಗೆ ಮಾನ್ಯ ಹಣಕಾಸು ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ಹಣಕಾಸು, ಸಣ್ಣ ಉಳಿತಾಯ, ಬಂದೀಖಾನೆಗಳು ಮತ್ತು ಗೃಹ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ಡಿ. ಎ. ಚಿನ್ನಪ್ಪ, ಶ್ರೀ ಎಂ. ವೀರಪ್ಪ ಮೊಯಿಲಿ ಮತ್ತಿತರ ಮಾನ್ಯ ಸದಸ್ಯರುಗಳು ತಂದಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ದಿನಾಂಕ ೨೮-೫-೮೮ರಂದು ಕೊಟಗೇರಿ ಗ್ರಾಮಸ್ಥರು ಅದೇ ಗ್ರಾಮಕ್ಕೆ ಸಂಬಂಧಿಸಿದ ಕೂಲಿ ಪ್ರಕರಣದಲ್ಲಿ ವಿಚಾರಣಾಧೀನ ಖೈದಿ ಆಗಿರುವ ಬಿ ಜೆ. ಮುತ್ತಣ್ಣ ಹಾಗೂ ಇತರರು ಸೇರಿ ಲೋಕೋಪಯೋಗಿ ಇಲಾಖೆಯ ಲಾರಿಯಲ್ಲಿ ತಾಳತ್‌ಮನೆ ಎಂಬ ಸ್ಥಳದಿಂದ ಮರದ ದಿಮ್ಮಿಗಳನ್ನು ಸಾಗಿಸಲು ಪ್ರಯತ್ನಿಸುತ್ತಿದ್ದಾರೆಂದು ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್, ಮಡಿಕೇರಿ ಇವರಿಗೆ ವರದಿ ಬಂತು. ಆ ಗ್ರಾಮಸ್ಥರು ಈ ದಿಮ್ಮಿಗಳನ್ನು ಸಾಗಿಸಲು ಸೂಕ್ತ ಪರವಾನಗಿ ಇಲ್ಲವೆಂಬ ಸಂಶಯದ ಮೇಲೆ, ಲಾರಿ, ಜನಗಳು ಮತ್ತು ಮರದ ದಿಮ್ಮಿಗಳನ್ನು ಸಾಗಿಸದಂತೆ ತಡೆಹಿಡಿದರು. ಕೂಡಲೇ ಮಡಿಕೇರಿ ಸರ್ಕಲ್ ಇನ್ಸ್‌ಪೆಕ್ಟರ್ ಗ್ರಾಮಾಂತರ ಇವರು ತಮ್ಮ ಸಿಬ್ಬಂದಿಗಳೊಡನೆ ಸ್ಥಳಕ್ಕೆ ಹೋಗಿ ಅವರನ್ನು ಪೋಲೀಸ್ ವಶಕ್ಕೆ ತೆಗೆದುಕೊಂಡರು ಮತ್ತು ಮರದ ದಿಮ್ಮಿಗಳನ್ನು ವಶಪಡಿಸಿಕೊಂಡರು. ಇದಕ್ಕೆ ಸಂಬಂಧಪಟ್ಟಂತೆ ಮಡಿಕೇರಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಕಲಂ ೪೪೭, ೪೨೭, ೧೪೮ ಮತ್ತು ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ ೧೯೬೫ರ, ೪ ಮತ್ತು ೨೨ಜಿ ಪ್ರಕಾರ ಕ್ರೈಮ್ ನಂಬ್ರ ೧೬೬/೮೮ರಲ್ಲಿ ಈ ಪ್ರಕರಣವನ್ನು ದಾಖಲೆ ಮಾಡಿಕೊಳ್ಳಲಾಯಿತು.

ಈ ಪ್ರಕರಣದಲ್ಲಿ ಮಡಿಕೇರಿ ಜಿಲ್ಲಾ ಕಾರಾಗೃಹದ ಒಬ್ಬ ಜೈಲರ್, ಒಬ್ಬ ವಾರ್ಡರ್ ಮತ್ತು ಲೋಕೋಪಯೋಗಿ ಇಲಾಖೆಯ ಲಾರಿ ಚಾಲಕ ಮತ್ತು ಇತರೆ ೮ ವಿಚಾರಣಾಧೀನ ಖೈದಿಗಳನ್ನು ದಸ್ತಗಿರಿ ಮಾಡಲಾಗಿದೆ.

ಕಾನೂನಿಗೆ ವಿರೋಧವಾಗಿ ಜೈಲಿನಲ್ಲಿರುವ ವಿಚಾರಣಾಧೀನ ಖೈದಿಗಳನ್ನು ಉಪಯೋಗಿಸಿ ಅಕ್ರಮವಾಗಿ ಶ್ರೀಮತಿ ಪಾರ್ವತಿಯವರ ಜಮೀನಿನಲ್ಲಿ ಕಾನೂನು ಬಾಹಿರವಾಗಿ ಮರಗಳನ್ನು ಕಡಿದು ಸಾಗಿಸಲು ಪ್ರಯತ್ನಿಸುತ್ತಿದ್ದರೆಂದು ವರದಿಯಾಗಿದೆ.